– – ಒ.ಎಸ್ 7/2021 ಪಿಡಬ್ಲೂ- 1

ದಿನಾಂಕ : 17-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು – ಶ್ರೀ. ಆರ್ ಕೆ ಎಂ ವಕೀಲರಿಂದ ಪ್ರತಿವಾದಿ ಪರ

ಈ ಪ್ರಕರಣದಲ್ಲಿ ಒಂದನೇ ಪ್ರತಿವಾದಿಯು ಸಾಕ್ಷಿ ನುಡಿಯಲು ನ್ಯಾಯಾಲಯದ ಮುಂದೆ ಬಂದಿರುವುದಿಲ್ಲ ಎಂದರೆ ಸರಿ. ನನ್ನ ಮತ್ತು ಒಂದನೇ ಪ್ರತಿವಾದಿಯ ನಡುವೆ ಸೌಹಾರ್ದ ಸಂಬಂಧ ಇರುತ್ತದೆ. ನಾನು ಒಂದನೇ ಪ್ರತಿವಾದಿಗೆ ನ್ಯಾಯಾಲಯಕ್ಕೆ ಬಂದು ಯಾವ ಸಂದರ್ಭದಲ್ಲಿ ಆಸ್ತಿಯನ್ನು ಮಾರಾಟ ಮಾಡಲಾಗಿದೆ, ಯಾವ ಕಾರಣಕ್ಕೆ ಮಾರಾಟ ಮಾಡಲಾಗಿದೆ ಮತ್ತು ತಮ್ಮ ಬಳಿ ಇರುವ ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿ ಸಾಕ್ಷಿ ನುಡಿಯಿರಿ ಎಂದು ನಾನು ಕೇಳಿಕೊಂಡಿರುತ್ತೇನೆ. ಅದಕ್ಕೆ ಒಂದನೇ ಪ್ರತಿವಾದಿಯವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುತ್ತೇನೆ ಎಂದು ನನ್ನ ಬಳಿ ಹೇಳಿರುತ್ತಾರೆ. ನಾನು ದಿಃ29.09.2021 ರಂದು ದಾವಾ ಆಸ್ತಿಯನ್ನು ಖರೀದಿಸಿರುತ್ತೇನೆ. ಈ ದಾವೆ ಯಾವ ದಿನಾಂಕಂದು ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ, ದಿಃ27.01.2021 ರಂದು ವಾದಿಯು ಒಂದನೇ ಪ್ರತಿವಾದಿಯವರ ವಿರುದ್ಧ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಯನ್ನು ಖರೀದಿ ಮಾಡಿದ್ದು ದಾವೆ ಚಾಲ್ತಿಯಲ್ಲಿರುವಾಗ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಮಾರಾಟ ಮಾಡುವ ಸಂದರ್ಭದಲ್ಲಿ1 ನೇ ಪ್ರತಿವಾದಿಯು ನಾನು ದಾವೆ ಸಲ್ಲಿಸಿದ್ದು ದಾವೆ ವಜಾ ಆಗಿರುತ್ತದೆ ಎಂದು ಹೇಳಿರುತ್ತಾರೆ. ನನಗೆ ದಾವೆಯ ಮಹತ್ವ ಗೊತ್ತಿರುತ್ತದೆ. ಒಂದು ಆಸ್ತಿಯನ್ನು ಖರೀದಿವಾಗ ಸದರಿ ಆಸ್ತಿಗೆ ಸಂಬಂದಿಸಿದಂತೆ ಇರುವ ದಾವೆಯ ಬಗ್ಗೆ ತಿಳಿದುಕೊಳ್ಳಬೇಕು ಎದರೆ ಸಾಕ್ಷಿ ನಾನು ತಿಳಿದುಕೊಂಡಿರುತ್ತೇನೆ ಎಂದು ಉತ್ತರಿಸುತ್ತಾರೆ.

1 ನೇ ಪ್ರತಿವಾದಿಯರು ಸಲ್ಲಿಸಿದ ದಾವೆಯ ಸ್ವರೂಪ ನಿಮಗೆ ಗೊತ್ತೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ಆಸ್ತಿಯನ್ನು ಮಾರಾಟ ಮಾಡುವ ಪೂರ್ವದಲ್ಲಿ ವಾದಿಯೊಂದಿಗೆ ಕ್ರಯ ಕರಾರು ಮಾಡಿಕೊಂಡಿದ್ದು ಸದರಿ ಕ್ರಯ ಕರಾರಿನಂತೆ ವಾದಿ ನಡೆದುಕೊಂಡಿಲ್ಲದ ಕಾರಣ ಸದರಿ ಕ್ರಯ ಕರಾರು ರದ್ದಾಗಿರುತ್ತದೆ ಎಂದು ಮತ್ತು ದಾವೆ ವಜಾ ಆಗಿರುತ್ತದೆ ಎಂದು ನನಗೆ 1 ನೇ ಪ್ರತಿವಾದಿ ಹೇಳಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ದಾವೆ ಯಾವ

ದಿನಾಂಕದಂದು ವಜಾ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ದಾವೆಯನ್ನು ಸಲ್ಲಿಸುವಾಗ ವಾದಿಯು ಎಷ್ಟು ನ್ಯಾಯಾಲಯದ ಶುಲ್ಕ ಪಾವತಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ವಾದಿ 2,37,135/- ರೂ ನ್ಯಾಯಾಲಯದ ಶುಲ್ಕ ಪಾವತಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ದಾವಾ ಆಸ್ತಿಯನ್ನು ಖರೀದಿಸುವಾಗ ದಾವೆ ಚಾಲ್ತಿಯಲಿತ್ತು ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ಖರೀದಿಸುವಾಗ ದಾವೆಗೆ ಸಂಬಂದಿಸಿದ ದಾವಾ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ನಾನು ಖರೀದಿಸಿದ ದಾವಾ ಆಸ್ತಿಯ ವಿಸ್ತೀರ್ಣ 12,000 ಚದರ ಅಡಿ ಆಗಿರುತ್ತದೆ. ದಿಃ20.09.2021 ರಂದು ವಾದಿ ಮ್ಯಾನ್ಯ ಉಚ್ಚನ್ಯಾಯಾಲಯದಲ್ಲಿ ಎಂ ಎಫ್ ಎ ಸಂಖ್ಯೆ 4673/2021 ಅನ್ನು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನನಗೆ ಆಸ್ತಿಯನ್ನು ಮಾರಾಟ ಮಾಡುವ ಎರಡು ದಿನದ ಮೊದಲು ಅಂದರೆ ದಿಃ27.09.2021 ರಂದು 1 ನೇ ಪ್ರತಿವಾದಿ ತಮ್ಮ ವಕೀಲರ ಮೂಲಕ ಮ್ಯಾನ್ಯ ಉಚ್ಚನ್ಯಾಯಾಲಯದ ಮುಂದೆ ಹಾಜರಾಗಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಮ್ಯಾನ್ಯ ಉಚ್ಚನ್ಯಾಯಾಲಯದಲ್ಲಿ ಮತ್ತು ಈ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವ ಬಗ್ಗೆ ನನಗೆ ಖುದ್ದು ಮಾಹಿತಿ ಇತ್ತು ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ವಾದಿ ಹಾಜರುಪಡಿಸಿದ ದಾಖಲಾತಿಗಳನ್ನು ನಾನು ನೋಡಿ ತಿಳಿದುಕೊಂಡಿರುವುದಿಲ್ಲ.

ನಾನು ಉಡುಪಿ ಮೆಡಿಕಲ್ ನ ಮಾಲೀಕ. ನನ್ನ ವಿದ್ಯಾ ಅರ್ಹತೆ ಡಿಪ್ಲಮೋ ಇನ್ ಪಾರ್ಮಸಿ ಆಗಿರುತ್ತದೆ. ದಾವಾ ಆಸ್ತಿಯ ಮೇಲೆ ದಾವೆ ಬಾಕಿ ಇರುವ ಕಾರಣ ಸದರಿ ಆಸ್ತಿಯನ್ನು ಯಾರು ಖರೀದಿ ಮಾಡಬಾರದು ಎಂದದು ನಿಪಿ-5 ರಂತೆ ಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಮತ್ತು 1 ನೇ ಪ್ರತಿವಾದಿ ಸದರಿ ಪತ್ರಿಕಾ ಪ್ರಕಟಣೆ ಓದಿರುತ್ತೇವೆ ಎಂದರೆ ಸರಿಯಲ್ಲ. ಪತ್ರಿಕಾ ಪ್ರಕಟಣೆ ಬಂದಿದ್ದರೂ ಸಹ ವಾದಿಗೆ ಮೋಸಮಾಡುವ ಉದ್ದೇಶದಿಂದ ನಾನು ಮತ್ತು 1 ನೇ ಪ್ರತಿವಾದಿ ಸೇರಿಕೊಂಡು ತರಾತುರಿಯಲ್ಲಿ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಖರೀದಿ ಮಾಡುವಾಗ ಯಾವುದೇ ಕಾನೂನು ಸಲಹೆಯನ್ನು ವಕೀಲರ ಬಳಿ ಲಿಖಿತ ಅಭಿಪ್ರಾಯ ಪಡೆದಿರುವುದಿಲ್ಲ. ದಾವಾ ಆಸ್ತಿಯನ್ನು ಖರೀದಿಸಲು ನಾನು ಯಾವುದೇ

ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಲ್ಲಿ ಸಾಲ ಮಾಡಿರುವುದಿಲ್ಲ. ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ವಾದಿಯ ಪರಿಚಯ ಇತ್ತು. ನಾನು ದಾವಾ ಆಸ್ತಿಯನ್ನು ಖರೀದಿಸುವ ಮೊದಲು ವಾದಿಯ ಬಳಿ ಹೋಗಿ ಆತ ಸಲ್ಲಿಸಿರುವ ದಾವೆಯ ಬಗ್ಗೆ ಮತ್ತು ದಾವಾ ಆಸ್ತಿಯ ಬಗ್ಗೆ ಯಾವುದೇ ವಿಚಾರಣೆ ಮಾಡಿರುವುದಿಲ್ಲ. 1 ನೇ ಪ್ರತಿವಾದಿ ಪ್ರಥಮವಾಗಿ ನನಗೆ ಅಂದಾಜು 2012-13 ನೇ ಸಾಲಿನಲ್ಲಿ ಪರಿಚಯಸ್ಥರಾಗಿರುತ್ತಾರೆ. 1 ನೇ ಪ್ರತಿವಾದಿಗೆ ದಾವಾ ಆಸ್ತಿ ಯಾವ ಇಸವಿಯಲ್ಲಿ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಕ್ರಯ ಪತ್ರದ ಬರಹಗಾರರು ನನ್ನ ವಕೀಲರಾದ ಸಂತೋಷ್ ಕುಮಾರ್ ರವರು. ಕ್ರಯ ಪತ್ರ ನೋಂದಣಿಯಾಗುವ ಒಂದು ವಾರದ ಮೊದಲು ನಾನು ನಮ್ಮ ವಕೀಲರ ಮುಖಾಂತರ ಕ್ರಯ ಪತ್ರ ತಯಾರಿಸಲು ಮಾಹಿತಿ ನೀಡಿರುತ್ತೇನೆ. ಕ್ರಯ ಪತ್ರ ತಯಾರಿಸುವ ಒಂದು ತಿಂಗಳ ಪೂರ್ವದಲ್ಲಿ ಕ್ರಯಕ್ಕೆ ಸಂಬಂಧಿಸಿದಂತೆ ಮಾತುಕತೆ ಆಗಿತ್ತು. ನಾನು ಪ್ರಸ್ತಾಪ ಆದ 10 ದಿನಗಳಲ್ಲಿ ದಾವಾ ಆಸ್ತಿಯನ್ನು ಖರೀದಿಸಲು ಒಪ್ಪಿಕೊಂಡಿದ್ದೆ. ನಾನು ದಾವಾ ಆಸ್ತಿಯನ್ನು ಖರೀದಿಸಲು ಒಪ್ಪಿಕೊಂಡಾಗ 1 ನೇ ಪ್ರತಿವಾದಿಗೆ ನ್ಯಾಯಾಲಯದಲ್ಲಿ ಯಾರು ವಕೀಲರು ಪ್ರತಿನಿಧಿಸುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಕ್ರಯ ಪತ್ರವಾಗುವಾಗ ದಾವೆ ಈ ನ್ಯಾಯಾಲಯದಲ್ಲಿ ಬಾಕಿ ಇತ್ತು ಹಾಗೂ ಕ್ರಯ ಆಗುವ ಸ್ವಲ್ಪ ದಿನದ ಮೊದಲು 1 ನೇ ಪ್ರತಿವಾದಿಯ ವಕೀಲರು ವಕಾಲತ್ ಅನ್ನು ಬೇರೆ ವಕೀಲರಿಗೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಕ್ರಯ ಆದ ನಂತರ ಮತ್ತೆ 1 ನೇ ಪ್ರತಿವಾದಿಯನ್ನು ಪ್ರತಿನಿಧಿಸಿ ಎನ್ ಒ ಸಿ ನೀಡಿರುವ ವಕೀಲರು ಪುನಃ 1 ನೇ ಪ್ರತಿವಾದಿ ಪರ ವಕಲಾತ್ ಅನ್ನು ವಹಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿ ಮತ್ತು ನಾನು ವಾದಿಗೆ ಮೋಸ ಮಾಡುವ ಉದ್ದೇಶದಿಂದ ಒಂದು ವ್ಯವಸ್ಥಿತವಾದ ಯೋಜನೆ ಮಾಡಿಕೊಂಡಿದ್ದೆವು ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ತಾಯಿಗೆ ಕ್ಯಾನ್ಸರ್ ಇರುವ ಬಗ್ಗೆ ದಾಖಲಾತಿಗಳನ್ನು ನಾನು ನೋಡಿರುತ್ತೇನೆ. ಆದರೆ ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ನಾನು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುವ ವಿಚಾರ 1 ನೇ ಪ್ರತಿವಾದಿಗೆ ಗೊತ್ತಿರುತ್ತದೆ. ನಾನು 1 ನೇ ಪ್ರತಿವಾದಿಯ ಬಳಿ ಅವರ ತಾಯಿಯ ವೈದ್ಯಕೀಯ ದಾಖಲೆಗಳನ್ನು ನೀಡುವಂತೆ ಕೇಳಿರುವುದಿಲ್ಲ. ಕ್ಯಾನ್ಸರ್ ಖಾಯಿಲೆಗೆ ಅತ್ಯುತ್ತಮ ಚಿಕಿತ್ಸೆ ನೀಡುವ ಆಸ್ಪತ್ರೆಗಳು

ಕನಾರ್ಟಕದಲ್ಲಿ ಇದೆ ಎಂದರೆ ಸಾಕ್ಷಿ ಎಲ್ಲಾ ಕಡೆ ಇದೆ ಎಂದು ನುಡಿಯುತ್ತಾರೆ. ಯಾವ ಯಾವ ದಿನ ಎಷ್ಟು ಎಷ್ಟು ವೆಚ್ಚಗಳನ್ನು 1 ನೇ ಪ್ರತಿವಾದಿ ಅವರ ತಾಯಿಯ ಚಿಕಿತ್ಸೆ ಬಗ್ಗೆ ಭರಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿಯ ತಾಯಿ ಭೂಪಾಲ್ ಗೆ ಹೋಗಿದ್ದಾಗಲೀ, ಅಲ್ಲಿ ಚಿಕಿತ್ಸೆ ಪಡೆದಿದ್ದಾಗಲೀ ಮತ್ತು ಅವರಿಗೆ ಹಣದ ಅವಶ್ಯಕತೆ ಇದ್ದದ್ದಾಗಲೀ ಸುಳ್ಳು ಎಂದರೆ ಸರಿಯಲ್ಲ. ಯಾವ ವೈದ್ಯರ ಬಳಿ 1 ನೇ ಪ್ರತಿವಾದಿ ತನ್ನ ತಾಯಿಗೆ ಚಿಕಿತ್ಸೆ ಕೊಡಿಸುತ್ತಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ಉಡುಪಿ ಮೆಡಿಕಲ್ಸಗೆ 1 ನೇ ಪ್ರತಿವಾದಿ ತನ್ನ ತಾಯಿಯ ಚಿಕಿತ್ಸೆಗೆ ಔಷದಿ ಚೀಟಿ ಹಿಡಿದುಕೊಂಡು ಬಂದಿರುವುದಿಲ್ಲ ಮತ್ತು ನಾನು ಯಾವುದೇ ಔಷದಿಗಳನ್ನು 1 ನೇ ಪ್ರತಿವಾದಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಔಷದಿಯನ್ನು ನೀಡಿರುವ ಬಗ್ಗೆ ದಾಖಲಾತಿ ನನ್ನ ಬಳಿ ಇದ್ದು ಅದನ್ನು ನಾನು ಹಾಜರುಪಡಿಸಬಲ್ಲೆ.

ನಾನು 1 ನೇ ಪ್ರತಿವಾದಿಯ ಬಳಿ ಅವರ ಮತ್ತು ವಾದಿಯ ನಡುವೆ ಆಗಿರುವ ದಿಃ23.04.2018 ರ ಕರಾರನ್ನು ನೋಡಿರುವುದಿಲ್ಲ. ವಾದಿ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಎಂ ಎಫ್ ಎ ಸಂಖ್ಯೆ 4673/2021 ರಲ್ಲಿ ವಾದಿಯು 69,46,000/- ರೂ ಠೇವಣಿಯಾಗಿ ಇಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿ ಫೈನಾನ್ಸ ವ್ಯವಹಾರ ಮಾಡುತ್ತಿದ್ದ ಕಾರಣ ನನಗೆ ಅವರ ಪರಿಚಯ ಇರುತ್ತದೆ. ವಾದಿಯು ಸಾಗರದಲ್ಲಿ ಆರ್ಥಿಕವಾಗಿ ಸಶಕ್ತರಾಗಿದ್ದರು ಎಂದರೆ ನಾನು ಕೇಳಿ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ನಿಪಿ-6 ರ ದಾಖಲಾತಿಯಲ್ಲಿ ವಾದಿಯು 69,46,000/- ರೂ ಠೇವಣಿಯಾಗಿ ಇಟ್ಟಿರುವುದು ಕಂಡುಬಂದಿರುತ್ತದೆ ಎಂದರೆ ಸಾಕ್ಷಿ ನಾನು ಆ ದಾಖಲಾತಿಯನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಈ ದಾವೆಯ ಬಗ್ಗೆ ಎಲ್ಲಾ ಸಂಪೂರ್ಣ ಮಾಹಿತಿ ಇದ್ದರೂ ಕೂಡ ನಾನು ಜಾರಿಕೆಯ ಉತ್ತರವನ್ನು ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ಬಳಿ ದಾವಾ ಆಸ್ತಿಯನ್ನು ಮಾರಾಟ ಮಾಡುವ ಮೊದಲು ದಾವಾ ಆಸ್ತಿಯ ಹಕ್ಕುಪತ್ರಗಳನ್ನು ನೀಡಿರುತ್ತಾರೆ. ಸದರಿ ಹಕ್ಕು ಪತ್ರ ನನ್ನ ಬಳಿ ಇರುತ್ತದೆ. ದಾವಾ ಆಸ್ತಿಗೆ ಸಂಬಂದಿಸಿದ ಹಿಂದಿನ ಹಕ್ಕುಪತ್ರಗಳನ್ನು ಹಾಜರುಪಡಿಸಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

1 ನೇ ಪ್ರತಿವಾದಿಗ ಈ ದಾವೆಯಲ್ಲಿ ಸಲ್ಲಿಸಿದ ಪ್ರತಿವಾದ ಪತ್ರವನ್ನು ನಾನು ನೋಡಿರುವುದಿಲ್ಲ. ಆದ್ದರಿಂದ 1 ನೇ ಪ್ರತಿವಾದಿ ಪ್ರತಿವಾದ ಪತ್ರದಲ್ಲಿ ಏನು ಸಾಧನೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯ ವಕೀಲರು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ನನಗೂ ಮತ್ತು 1 ನೇ ಪ್ರತಿವಾದಿಗೂ ಒಬ್ಬರೇ ವಕೀಲರು ಎಂದರೆ ಸರಿಯಲ್ಲ. ವಾದಿ ದಾವಾ ಆಸ್ತಿಯನ್ನು ಕ್ರಯದ ಮೊತ್ತಕ್ಕೆ ಕೊಂಡುಕೊಳ್ಳಲು ಯಾವಾಗಲೂ ಸಿದ್ಧರಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಈ ಪ್ರಕರಣಕ್ಕೆ ಬೇಕಾದ ಎಲ್ಲಾ ದಾಖಲೆಗಳನ್ನು ಹಾಜರುಮಾಡಬೇಕು ಎನ್ನುವ ಬಗ್ಗೆ ನಿಮಗೆ ಮಾಹಿತಿ ಇದೆಯೇ? ಎನ್ನುವ ಪ್ರಶ್ನೆಗೆ ಸಾಕ್ಷಿಯು ನಮ್ಮ ವಕೀಲರು ಹೇಳಿರುವ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿರುವೆನು ಎಂದು ಉತ್ತರಿಸುತ್ತಾರೆ.

ನಮ್ಮ ಮೆಡಿಕಲ್ ಶಾಪ್ ಗೆ 1 ನೇ ಪ್ರತಿವಾದಿ ಮತ್ತು ಅವರ ತಾಯಿ ಇಬ್ಬರೂ ಬರುತ್ತಿದ್ದರು. 1 ನೇ ಪ್ರತಿವಾದಿಯ ತಾಯಿಯ ಹೆಸರು ಬಾನಿಷರದ್ ಆಗಿರುತ್ತದೆ. 1 ನೇ ಪ್ರತಿವಾದಿಯ ತಾಯಿಯನ್ನು 1 ತಿಂಗಳ ಹಿಂದೆ ಕೊನೆಯದಾಗಿ ನೋಡಿರುತ್ತೇನೆ. ನಾನು ಅವರ ಬಳಿ ಅವರು ಚಿಕಿತ್ಸೆ ಪಡೆಯುತ್ತಿದ್ದ ವೈದ್ಯರ ವಿವರ, ಚಿಕಿತ್ಸೆ ಪಡೆಯುತ್ತಿದ್ದ ಆಸ್ಪತ್ರೆ ಮತ್ತು ವೈದ್ಯಕೀಯ ಖರ್ಚಿನ ವಿವರಗಳನ್ನು ಕೇಳಿರುವುದಿಲ್ಲ. ಅವರು ಚಿಕಿತ್ಸೆ ಪಡೆದ ಬಗ್ಗೆ ಯಾವುದೇ ದಾಖಲಾತಿಯನು ನಾನು ನೋಡಿರುವುದಿಲ್ಲ ಸಾಕ್ಷಿ ಮುಂದುವರೆದು ವೈದ್ಯಕೀಯ ಚೀಟಿಗಳನ್ನು ನೋಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಕೊನೆಯದಾಗಿ 1 ನೇ ಪ್ರತಿವಾದಿ ತನ್ನ ತಾಯಿಗೆ ಔಷದಿ ಖರೀದಿ ಮಾಡಿದ ದಿನಾಂಕ ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯ ತನ್ನ ತಾಯಿಯ ಚಿಕಿತ್ಸೆಗಾಗಿ ಹಣದ ಅವಶ್ಯಕತೆ ಇದೆ ಎನ್ನುವ ಕಾರಣಕ್ಕೆ ದಾವಾ ಆಸ್ತಿಯನ್ನು ನನಗೆ ಮಾರಾಟ ಮಾಡಿರುತ್ತಾರೆ ಎಂದು ಹೇಳುವ ವಿಷಯ ಸುಳ್ಳು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿ ತನ್ನ ತಾಯಿಗೆ ಚಿಕಿತ್ಸೆ ಕೊಡಿಸುವಷ್ಟು ಯಾವ ಅಗತ್ಯತೆಯೂ ಇರಲಿಲ್ಲ ಎಂದರೆ ಸರಿಯಲ್ಲ. ವಾದಿ ದಿನಾಂಕಃ 26.12.2020 ರಂದು ತಮ್ಮ ವಕೀಲರಾದ ಅರುಣ್ ಎಂ ಎನ್ ರವರ ಮುಖಾಂತರ ಬಾಕಿ ಇರುವ ಕ್ರಯ ಪ್ರತಿಫಲವನ್ನು ಪಡೆದು ಕ್ರಯ ಪತ್ರವನ್ನು ನೋಂದಣಿ ಮಾಡಿಕೊಡುವಂತೆ 1 ನೇ ಪ್ರತಿವಾದಿಗೆ ಒಂದು ನೋಟೀಸು ನೀಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ನೋಟೀಸು ದಿಃ29.12.2020 ಕ್ಕೆ 1 ನೇ ಪ್ರತಿವಾದಿಗೆ

ತಲುಪಿರುತ್ತದೆ ಮತ್ತು ನನಗೆ ಈ ಬಗ್ಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ದಿಃ15.01.2021 ರಂದು ಉಪ ನೋಂದಾಣಿಧಿಕಾರಿಗಳ ಕಛೇರಿಗೆ ಬಂದು ಕ್ರಯದ ಪ್ರತಿಫಲವನ್ನು ಕ್ರಯಪತ್ರವನ್ನು ನೋಂದಣಿ ಮಾಡಿಸಿಕೊಡುವಂತೆ ಸದರಿ ನೋಟೀಸಿನಲ್ಲಿ ಕೋರಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ 1 ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ತಾನು ವಾದಿ ಹೇಳಿದಂತೆ ಉಪ ನೋಂದಾಣಿಧಿಕಾರಿಗಳ ಕಛೇರಿಗೆ ಹೋಗಿದ್ದೆ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿ ನ್ಯಾಯಾಲಯದಲ್ಲಿ ಅವರ ಸ್ನೇಹಿತನ ಪಾಸ್ ಬುಕ್ ಅನ್ನು ಹಾಜರುಪಡಿಸಿದ್ದು, ಆತನಿಗೆ ಆರ್ಥಿಕ ಸಾಮರ್ಥ್ಯ ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತಾನೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಪಿ–1 ಕ್ರಯ ಕರಾರನ್ನು ನೋಡಲು ನಿಮಗೆ ಯಾವುದಾದರೂ ತೊಂದರೆ ಇತ್ತೇ? ಎನ್ನುವ ಪ್ರಶ್ನೆಗೆ ಸಾಕ್ಷಿ ನನಗೆ ಅದನ್ನು ನೋಡುವ ಅವಶ್ಯಕತೆ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ಕ್ರಯ ಕರಾರಿನಲ್ಲಿ ವಾದಿ ತನಗೆ ಅಥವಾ ತಾನು ಹೇಳುವ ವ್ಯಕ್ತಿಗೆ ಕ್ರಯ ಪತ್ರ ಮಾಡಿಕೊಡಬೇಕು ಎಂದು ಬರೆಯಲಾಗಿದೆ ಮತ್ತು ಈ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಬಾಕಿ ಕ್ರಯಪ್ರತಿಫಲವನ್ನು ಕೊಡಲು ವಾದಿ ಸಿದ್ಧರಿದ್ದರೂ ಸಹ 1 ನೇ ಪ್ರತಿವಾದಿಯು ದಾವಾ ಆಸ್ತಿಗೆ ಸಂಬಂದಿಸಿದ ಫಾರಂ–9 ಮತ್ತು ಫಾರಂ –11 ಹಾಗೂ ಇನ್ನಿತರ ದಾಖಲಾತಿಗಳನ್ನು ಸರಿಪಡಿಸಲು ಬಾಕಿ ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಕೆಲಪಿ ತಿದ್ದುಪಡಿ ಬಾಕಿ ಇರುತ್ತದೆ ಎಂದು ತೋರಿಸಲು ನಿಪಿ–8 ರಿಂದ ನಿಪಿ–12 ಅನ್ನು ವಾದಿ ಹಾಜರಪಡಿಸಿರುತ್ತಾರೆ ಎಂಬ ಬಗ್ಗೆ ಸಹ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ.

ನಾನು ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆಯುವ ಸಮಯದಲ್ಲಿ ಈ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವ ಬಗ್ಗೆ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಎಂ ಎಫ್ ಎ ಸಂಖ್ಯೆ 4673/2021 ಬಾಕಿ ಇರುವ ಬಗ್ಗೆ ನನಗೆ ಗೊತ್ತಿದ್ದರೂ ಸಹ ಹಾಗೂ ಪತ್ರಿಕೆಯಲ್ಲಿ ಜಾಹಿರಾತು ಬಂದ ವಿಚಾರ ಗೊತ್ತಿದ್ದರೂ ಸಹ ಹಾಗೂ ನಿಪಿ– 3 ನೊಟೀಸಿನ ಬಗ್ಗೆ ಮಾಹಿತಿ ಇದ್ದರೂ ಸಹ ನಾನು ದಾವಾ ಆಸ್ತಿಯನ್ನು ಖರೀದಿಸಿರುವ ಕಾರಣ ನಾನು ಮೌಲ್ಯತೆತ್ತ ಪ್ರಾಮಾಣಿಕ ಖರೀದಿದಾರನಲ್ಲ ಎಂದರೆ ಸರಿಯಲ್ಲ. ಈ ಕಾರಣದಿಂದ ನನಗೆ ಕ್ರಯ

ಪತ್ರದಿಂದ ದಾವಾ ಆಸ್ತಿಯ ಯಾವುದೇ ಹಕ್ಕು ಪ್ರಾಪ್ತಿ ಆಗಿರಲಿಲ್ಲ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡಲು ನಾನು 1 ನೇ ಪ್ರತಿವಾದಿಯೊಂದಿಗೆ ಶಾಮೀಲಾಗಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ನಾನು ಯಾವುದಾದರು ಕ್ರಯದ ಪ್ರತಿಫಲವನ್ನು ನೀಡಿದ್ದ ಪಕ್ಷದಲ್ಲಿ ಸದರಿ  ಹಣವನ್ನು ವಾಪಾಸ್ಸು ಪಡೆಯಲು ಮಾತ್ರ ನಾನು ಅರ್ಹನಾಗಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ರೀತಿಯ ಕ್ಯಾನ್ಸರ್ ಕಾಯಿಲೆ ಇದ್ದರೂ ರೂ 10 ಲಕ್ಷ ದಷ್ಟು ಹಣ ಸಾಕಾಗುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಹಾಗೂ ಪ್ರತಿವಾದ ಪತ್ರದಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ  ಹಿರಿಯ ವ್ಯವಹಾರ  ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂಡಾಧಿಕಾರಿಗಳು, ಸಾಗರ